

‘ಮಿಸ್ ಯುನಿವರ್ಸ್’ – ಪ್ರತಿ ಸ್ಪರ್ಧಿಯ ಜೀವನದಲ್ಲಿ ಎಂದೆಂದೂ ಮರೆಯಲಾರದ, ಜೀವನದಲ್ಲಿ ಒಮ್ಮೆ ಮಾತ್ರ ಒದಗಿಬರುವ, ನೆನೆದಾಗಲೆಲ್ಲ ಪುಳಕ ನೀಡುವ ಬಹು ವಿಶಿಷ್ಟ ಕ್ಷಣ. ಆ ಒಂದು ಕ್ಷಣದ ತೀರ್ಮಾನ ನಿನ್ನೆಯವರೆಗೂ ಯಾರೂ ಅಲ್ಲದ ಒಬ್ಬರನ್ನು ರಾತ್ರೋರಾತ್ರಿ ಪ್ರಖ್ಯಾತರನ್ನಾಗಿ ಮಾಡಿಬಿಡುತ್ತದೆ. ಅದು ಯಾರಿಗೆ ಒಲಿಯುತ್ತದೆ... ಅವರಿಗೇ ಯಾಕೆ ಒಲಿಯಿತು... ಅನ್ನುವುನ್ನು ಸುಲಭವಾಗಿ ಯಾರೂ ಅಂದಾಜಿಸಲಾರರು

ಪ್ರಪಂಚದ ವಿವಿಧ ಭಾಗಗಳಿಂದ ಸ್ಪರ್ಧಿಸಿದ ಎಲ್ಲ ಸುಂದರಿಯರ ಬಗ್ಗೆ ನನಗೆ ಅಪಾರ ಗೌರವ ಮತ್ತು ಮೆಚ್ಚುಗೆ ಇದೆ. ನಾನು ಅವರೆಲ್ಲರಿಗಿಂತ ಶ್ರೇಷ್ಠ ಎನ್ನುವ ಭಾವನೆ ನನಗಿಲ್ಲ. ನಾನು ನನ್ನ ದೇಶವನ್ನು ಪ್ರತಿನಿಧಿಸಿದ್ದು ಪರಿಪೂರ್ಣತೆಯಿಂದಲ್ಲ, ನನ್ನದೇ ಆದ ಇತಿಮಿತಿಗಳ ನಡುವೆಯೂ ನಾನು ನೈಜವಾಗಿದ್ದೆ. ನಮ್ಮ ನಗು, ಮಾತು, ಉತ್ತರ, ನಡೆ–ನುಡಿಗಳಲ್ಲಿ ನೈಜತೆಯಿದ್ದರೆ ಅದುವೇ ನಮ್ಮನ್ನು ಇತರರಿಗಿಂತ ಭಿನ್ನವಾಗಿ ನಿಲ್ಲಿಸುತ್ತದೆ. ಈ ಗೆಲುವು ನನ್ನ ದೇಶಕ್ಕೆ ಎಷ್ಟು ಮುಖ್ಯವಾಗಿದೆ ಮತ್ತು ಮಿಸ್ ಯುನಿವರ್ಸ್ ಮೂಲಕ ಭಾರತಕ್ಕೆ ಹೇಗೆ ಅಂತರರಾಷ್ಟ್ರೀಯ ಮನ್ನಣೆಯನ್ನು ತಂದುಕೊಡಬಲ್ಲೆ ಎನ್ನುವುದನ್ನು ನಾನು ತೀರ್ಪುಗಾರರಿಗೆ ಮನದಟ್ಟು ಮಾಡಿದೆ. ಇದಿಷ್ಟೇ ನಾನು ಮಾಡಿದ್ದು.

◆ **ಪ್ರಶ್ನೋತ್ತರ ಸುತ್ತಿನಲ್ಲಿ ನಿಮ್ಮ ಗೆಲುವನ್ನು ನಿರ್ಧರಿಸಿದ ಪ್ರಶ್ನೆ ಯಾವುದು ಮತ್ತು ನಿಮ್ಮ ಉತ್ತರ ಹೇಗೆ ಭಿನ್ನವಾಗಿತ್ತು?**

‘ದೇಶಗಳು ತಮ್ಮ ಆರ್ಥಿಕ ಒತ್ತಡದ ಹೊರತಾಗಿಯೂ ಕೋವಿಡ್ ಕಾರಣದಿಂದಾಗಿ ದೇಶಕ್ಕೆ ಬೀಗ ಹಾಕಬೇಕೇ ಅಥವಾ ತಮ್ಮ ಗಡಿಗಳನ್ನು ತೆರೆದು ಸೋಂಕಿನ ಪ್ರಮಾಣ ಹೆಚ್ಚಾಗುವ ಅಪಾಯವನ್ನು ಎದುರಿಸಬೇಕೇ?’ ಎನ್ನುವುದು ನನಗೆ ಬಂದ ಪ್ರಶ್ನೆಯಾಗಿತ್ತು. ಕಳೆದ ಒಂದು ವರ್ಷದಿಂದ ನಾವು ಇದನ್ನೇ ಚಿಂತಿಸುತ್ತಿದ್ದೇವೆ, ಇದನ್ನೇ ಬದುಕುತ್ತಿದ್ದೇವೆ ಮತ್ತು ಇದನ್ನೇ ಮಾತಾಡುತ್ತಿದ್ದೇವೆ. ಹೀಗಾಗಿ ಉತ್ತರ ನನಗೆ ಸುಲಭವಾಯ್ತು. ನನಗನಿಸಿದ್ದನ್ನು ಪ್ರಾಮಾಣಿಕವಾಗಿ ಹೇಳಿದೆ. ‘ಭಾರತ ಇದೀಗ ಏನನ್ನು ಅನುಭವಿಸುತ್ತಿದೆ ಎಂಬುದಕ್ಕೆ ನಾನು ಸಾಕ್ಷಿಯಾಗಿದ್ದೇನೆ, ನಮ್ಮ ಪ್ರೀತಿಪಾತ್ರರ ಆರೋಗ್ಯಕ್ಕಿಂತ ಬೇರೇನೂ ಮುಖ್ಯವಲ್ಲ ಎನ್ನುವುದನ್ನು ನಾನು ಅರಿತುಕೊಂಡಿದ್ದೇನೆ. ಮತ್ತು ನಾವು ಆರ್ಥಿಕತೆ ಹಾಗೂ ಆರೋಗ್ಯದ ನಡುವೆ ಸಮತೋಲನವನ್ನು ಕಾಯುವುದೂ ಕೂಡ ಅಷ್ಟೆ ಮುಖ್ಯ’ ಎನ್ನುವುದು ನನ್ನ ಉತ್ತರವಾಗಿತ್ತು.

◆ **ತಿದ್ದಿತೀಡಿದ ಕಾಯ, ಮುದ್ದು ಮುಖ, ಹೊಳೆವ ಕಂಗಳು... ನಿಮ್ಮ ಸೌಂದರ್ಯದ ಗುಟ್ಟೇನು?**

ನನ್ನ ತರಬೇತುದಾರ ಅನಿಲ್, ನ್ಯೂಟ್ರಿಷನಿಸ್ಟ್ ಜಿನಲ್ ಅವರಿಗೆ ಈ ಕ್ರೆಡಿಟ್ ಸಲ್ಲಬೇಕು. ಆದರೆ ಸೌಂದರ್ಯ ಅಡಗಿರುವುದು ಸಂತೋಷದಲ್ಲಿ ಎನ್ನುವುದು ನನಗೆ ಗೊತ್ತು. ನಾವು ತಿನ್ನುವ ಊಟ, ತೊಡುವ ಉಡುಗೆ, ಮಾಡುವ ವರ್ಕ್‌ಔಟ್ ಎಲ್ಲವನ್ನೂ ಪ್ರೀತಿಸಿದಾಗಲೇ ಕಣ್ಣಲ್ಲಿ ಸೌಂದರ್ಯ ಸೂಸಲು ಸಾಧ್ಯ.

◆ **ನಾಳಿನ ಕನಸುಗಳೇನು?**

ನಾನು ಕನಸುಗಾರ್ತಿ. ಮನರಂಜನಾ ಕ್ಷೇತ್ರದಲ್ಲಿರುವುದರಿಂದ ಸಹಜವಾಗಿಯೇ ನಟನೆಯತ್ತ ಒಲವಿದೆ. ಆದರೆ ಅದಕ್ಕಿಂತಲೂ ಸಾಹಸಮಯವಾದ್ದು ಏನಾದರೂ ಮಾಡಬೇಕೆನ್ನುವ ಆಸೆ ಇದೆ. ಕೃಷಿಯಲ್ಲಿ ಏನಾದರೂ ಮಾಡಬೇಕೆಂದುಕೊಂಡಿರುವೆ. ಕೃಷಿಕ ಮಹಿಳೆಯರ ಬದುಕನ್ನು ಉನ್ನತೀಕರಿಸುವ ಯೋಜನೆಗಳನ್ನು ರೂಪಿಸಬೇಕು ಎನ್ನುವುದು ನನ್ನ ಬಹುದಿನದ ಕನಸು. ಉದ್ಯಮದಲ್ಲಿಯೂ ನನಗೆ ಆಸಕ್ತಿ ಇದೆ. ನನ್ನ ದೇಶ ಈಗ ಎಂತಹ ಕಠಿಣ ಸಮಯವನ್ನು ಎದುರಿಸುತ್ತಿದೆ ಎನ್ನುವದರ ಅರಿವು ನನಗಿದೆ. ಮೊದಲು ನನ್ನ ಸಮಾಜಕ್ಕಾಗಿ ಏನಾದ್ರೂ ಮಾಡಬೇಕು. ಸೌಂದರ್ಯ ಸ್ಪರ್ಧೆ ಕೇವಲ ಸೌಂದರ್ಯ ಕುರಿತಾದದ್ದಲ್ಲ, ಅದು ಮಾನವೀಯತೆಯ ಕುರಿತಾದದ್ದೂ ಹೌದು.

◆ **ಈ ಗೆಲುವಿನಿಂದ, ವೇದಿಕೆಯಿಂದ ನೀವು ಕಲಿತ ಪಾಠ?**

ಈ ವೇದಿಕೆಯಿಂದ ಸಾಕಷ್ಟು ಪಾಠಗಳನ್ನು ಕಲಿತೆ. ಅವುಗಳನ್ನೆಲ್ಲಾ ಮುಂದಿನ ಹಂತಕ್ಕೆ ತೆಗೆದುಕೊಂಡು ಹೋಗಬೇಕು. ಅಲ್ಲಿ ಕಲಿತ ಪಾಠಗಳು ನಾಳಿನ ದಾರಿಗೆ ಬೆಳಕಾಗಬೇಕು. ಸಂಕಲ್ಪ ಮತ್ತು ಪ್ರೇರಣೆ ನಮ್ಮಲ್ಲಿ ಹೆಚ್ಚು ಚೈತನ್ಯ ತುಂಬುತ್ತದೆ ಎನ್ನುವುದನ್ನು ಈ ಗೆಲುವು ನನಗೆ ತೋರಿಸಿಕೊಟ್ಟಿದೆ. ನಮ್ಮ ಸುತ್ತ ಎಲ್ಲವೂ ವಿಫಲವಾದಾಗ, ನಾವು ಅದೆಲ್ಲವನ್ನು ದಾಟಿ ಮುಂದೆ ಹೋಗುವ ಧೈರ್ಯವನ್ನು ಹೊಂದಿರಬೇಕು. ದೇಶದಲ್ಲಿ, ಪ್ರಪಂಚದಲ್ಲಿ ಇಷ್ಟೆಲ್ಲಾ ನಡೆಯುವಾಗ ನಾನು ಹೇಗೆ ಇದೆಲ್ಲವನ್ನು ಸಾಧಿಸಿದೆ! ಗೊತ್ತಿಲ್ಲ. ನನ್ನ ಕೆಲಸ ಹಾಗೂ ನನ್ನ ದೇಶದ ಮೇಲಿನ ಪ್ರೀತಿ ನನ್ನಿಂದ ಇದನ್ನೆಲ್ಲಾ ಮಾಡಿಸಿತು. ಜೀವನದಲ್ಲಿ ನಮ್ಮಲ್ಲಿ ಏನಿದೆಯೊ ಅದನ್ನು ಸಂಭ್ರಮಿಸುವುದನ್ನು ನಾವು ಕಲಿಯಬೇಕು. ಕೇವಲ ವೈಯಕ್ತಿಕ ಮಟ್ಟದಲ್ಲಿ ಈ ಮಾತನ್ನು ಹೇಳುತ್ತಿಲ್ಲ, ಒಂದು ರಾಷ್ಟ್ರವಾಗಿಯೂ ಅಷ್ಟೆ; ನಮ್ಮಲ್ಲಿರುವುದನ್ನು ನಾವು ಸಂಭ್ರಮಿಸಿದಾಗಲೇ ನಿಜವಾದ ಸೌಂದರ್ಯ ಕಾಣಲು ಸಾಧ್ಯ.

ಪ್ರತಿಕ್ರಿಯಿಸಿ: feedback@sudha.co.in